ಮುಖ ತೋರಿಸು, ನೋಡಬೇಕು ಎಂದರು. ಸ್ವಲ್ಪವೂ ಜಗ್ಗಲಿಲ್ಲ ಮಗ. ಫೋನ್ ಮಾಡಿದರೆ ಆತ ತೆಗೆದುಕೊಳ್ಳುತ್ತಿರಲಿಲ್ಲ. ಕೊನೆಗೆ ಸವಿತಾಳ ಮೊರೆ ಹೊಕ್ಕರು. ಅವಳ ಇ – ಮೇಲಿಗೇನೋ ಉತ್ತರ ಬಂತು – "ಈ ಅಪ್ಪನ ಮಾತನ್ನು ಕೇಳುವ ಅಮ್ಮನ ಗೊಡವೆ ನನಗೆ ಬೇಡ." ನಂತರ ಅಕ್ಕನ ಸಂಪರ್ಕವನ್ನೂ ತೊರೆದ.

ಅವರಿಬ್ಬರ ಮದುವೆ ಜರುಗಿದ ಎರಡೇ ದಿವಸಗಳಲ್ಲಿ ಫೇಸ್‌ಬುಕ್ಕಿನಲ್ಲಿ ಅದೇ ಸುದ್ದಿ. ವಿವಿಧ ಭಂಗಿಗಳಲ್ಲಿ ಸುನಿಲ್ ಮತ್ತು ರಿಂಕೊ ಅವರ ಫೋಟೊಗಳು, ಜಗತ್ತಿನ ಹಲವೆಡೆಗಳಿಂದ ಅಭಿನಂದನೆಗಳು. ರಾಗಿಣಿ ಒಮ್ಮೆ ಇವುಗಳತ್ತ ಕಣ್ಣು ಹಾಯಿಸಿದರು. ನಂತರ ದುಃಖ ಇಮ್ಮಡಿಸಿ ಫೇಸ್‌ಬುಕ್ ನೋಡುವುದನ್ನೇ ಬಿಟ್ಟುಬಿಟ್ಟರು.

ಮದುವೆಯಾದ ನಂತರ ದಂಪತಿ ಅಮೆರಿಕಾದಲ್ಲಿ ತುಸು ಓಡಾಡಿ, ಒಂದು ವಾರ ಪ್ಯಾರಿಸ್ಸಿನಲ್ಲಿ ವಿಹರಿಸಿ ಟೋಕಿಯೊಗೆ ಹಿಂದಿರುಗಿದರು. ಎರಡು ಬೆಡ್ ರೂಮಿರುವ ಅಪಾರ್ಟ್‌ಮೆಂಟ್ ಒಂದನ್ನು ಬಾಡಿಗೆಗೆ ಪಡೆದರು. ಜಪಾನಿನ ಸಾಮಾನ್ಯ ಗೃಹಿಣಿ ಎನಿಸಿ ರಿಂಕೊ ಕೆಲಸದಲ್ಲಿ ಮುಂದುವರೆಯುವ ಮನಸ್ಸು ಮಾಡಲಿಲ್ಲ. ಇನ್ನು ಹೇಳುವ ಅಗತ್ಯವೇ ಇಲ್ಲ. ಒಂದು ವರ್ಷದ ಒಳಗೆ ಅವಳಿಗೆ ಒಂದು ಮಗುವೂ ಆಯಿತು. ಗಂಡು, ಹೆಸರು ಹಯೂಟೊ. ಈ ವಿಷಯವೂ ರಾಗಿಣಿಯವರನ್ನು ತಲಪಿತು. ಮೊಮ್ಮಗನನ್ನು ನೋಡುವ ಹಂಬಲ, ಆದರೆ ದಾರಿ ತೋರಲಿಲ್ಲ. ಅಗರ್ವಾಲ್ ಅವರದ್ದು ಒಂದೇ ಪಟ್ಟು – "ನಮ್ಮಿಂದ ಹೀಗೆ ದೂರಹೋದ ಮಗ ಮಗನೇ ಅಲ್ಲ; ಅವನು ನನ್ನ ಮುಂದೆ ಬಂದು ನಿಂತರೂ ನಾನು ಮಾತನಾಡಿಸುವುದಿಲ್ಲ."

ಮಗುವಾಗಿ ಎರಡು ವರ್ಷಗಳಾದವು. ರಾಗಿಣಿಯ ಸ್ನೇಹಿತೆಯರು ಆಗಾಗ್ಗೆ ಹೇಳುತ್ತಿದ್ದರು – "ನಿನ್ನ ಮೊಮ್ಮಗನನ್ನು ಫೇಸ್‌ಬುಕ್ಕಿನಲ್ಲಿ ನೋಡಿದೆ. ತುಂಬಾ ಚೆನ್ನಾಗಿದ್ದಾನೆ. ತುಂಬಾ ಚೂಟಿ." ಕೇಳಿ ಇವರಿಗೆ ಸಂಕಟ. ಅವರಿಗೆ ಈಗ ದುಡ್ಡು ಕಾಸು, ಅಂತಸ್ತು, ದೊಡ್ಡಸ್ತಿಕೆ, ಏನೂ ಬೇಕಾಗಿರಲಿಲ್ಲ. ದೂರಹೋದ ಮಗನನ್ನು ನೋಡಿದರೆ ಸಾಕು ಎನ್ನಿಸಿತು.

ತಾನು ತಂದೆಯಾದ ಮೇಲೆ ಸುನಿಲನ ವರ್ತನೆ ಬದಲಾಯಿತು. ಹಯೂಟೊ ದಿನದಲ್ಲಿ ಕೆಲವು ಗಂಟೆಗಳ ಕಾಲ ಶಿಶುವಿಹಾರಕ್ಕೆ ಹೋಗುತ್ತಿದ್ದ. ಅಲ್ಲಿ ದಂಪತಿಗೆ ಮಿಕ್ಕ ತಂದೆ ತಾಯಿಯರ ಪರಿಚಯವಾಯಿತು. ಮಕ್ಕಳ ಹುಟ್ಟು ಹಬ್ಬ, ಎಲ್ಲರೂ ಸೇರಿ ಪಿಕ್‌ನಿಕ್ ಹೋಗುವುದು ಸಾಮಾನ್ಯವಾಯಿತು. ಕೆಲವು ಬಾರಿ ಮಕ್ಕಳ ತಾತಅಜ್ಜಿ ಬರುತ್ತಿದ್ದರು. ಬಂದವರು ಸುನಿಲ್ ಮತ್ತು ರಿಂಕೊ ಇವರುಗಳ ತಂದೆತಾಯಿಯರ ಬಗ್ಗೆ ವಿಚಾರಿಸುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ರಿಂಕೊಗೆ ಅನ್ನಿಸುತ್ತಿತ್ತು, "ನನಗೆ ತಂದೆತಾಯಿ ಯಾರೂ ಇಲ್ಲ. ಸುನಿಲನ ತಂದೆತಾಯಿ ಇಲ್ಲೇ ಇದ್ದಿದ್ದರೆ ಎಷ್ಟು ಚೆನ್ನಾಗಿರೋದು" ಸುನಿಲನಿಗೆ ಅವಳು ಹೇಳಲಾರಂಭಿಸಿದಳು, "ಸುಮ್ಮನೆ ನೀನು ನಿಮ್ಮ ತಂದೆತಾಯಿಯರಿಂದ ದೂರಾದೆ. ಅವರು ಇಲ್ಲಿಗೆ ಬಂದು ಹೋಗಿ ಮಾಡುವಂತಿದ್ದರೆ ಹಯೂಟೊಗೂ ಅಜ್ಜಿತಾತ ಇರುತ್ತಿದ್ದರು". ಕ್ರಮೇಣ ತಾನು ಮಾಡಿದ ತಪ್ಪಿನ ಅರಿವಾಯಿತು, ಸುನಿಲನಿಗೆ. ತನ್ನ ತಾಯಿಯಿಂದ ಹಾಗೆ ದೂರವಾಗಬಾರದಿತ್ತು ಎನಿಸಿತು. ಅವಳು ಬಂದು ತಮ್ಮ ಮೊಮ್ಮಗನನ್ನು ನೋಡಲಿ ಎನಿಸಿತು. ಆದರೆ ತಾನೇ ಅವಳನ್ನು ಬರಹೇಳಲು ಬಿಗುಮಾನ. ಒಂದೆರಡು ಬಾರಿ ತಾಯಿಗೆ ಬಾ ಎಂದು ಇ – ಮೇಲನ್ನು ಪೂರ್ತಿಯಾಗಿ ಬರೆದು 'ಸೆಂಡ್' ಬಟನ್ ಕ್ಲಿಕ್ ಮಾಡುವ ವೇಳೆಗೆ ಏನೋ ರೋಷ ಉಕ್ಕಿ ಸುಮ್ಮನಾಗಿದ್ದ. ಕಾಲ ಕ್ರಮೇಣ ಎಲ್ಲವೂ ಸರಿ ಹೋಗುತ್ತದೆ ಎಂದುಕೊಂಡ.